ಶ್ರೀ ಬಿ.ಎ. ಮೊಯಿದ್ದೀನ್:- ಈ ವಿಚಾರ ನನಗೆ ಗೊತ್ತಿದೆ, ನಾನು ಆ ಬಗ್ಗೆ ತಿಳಿಸಿದ್ದೇನೆ. ಕೂಡಲೇ ನಮ್ಮ ಅಧಿಕಾರಿಗಳನ್ನು ಕಳುಹಿಸಿಕೊಟ್ಟು ಅಲ್ಲಿ ಎಷ್ಟು ಹಣ ಆ ಜಿಲ್ಲಾ ಪಂಚಾಯತಿಗೆ ಕೊಡಲೇಬೇಕಾಗಿತ್ತೋ ಅದನ್ನು ನಾವು ವಾಪಸ್ ಕೊಡಿಸಿದ್ದೇವೆ. ನಾವು ಹದ್ದಿನ ಕಣ್ಣಿನಿಂದ ಇದನ್ನೆಲ್ಲಾ ನೋಡುತ್ತಿದ್ದೇವೆ. ಈ ಹಿಂದೆ ಏನು ಆಗಿತ್ತೋ ಅದು ಈಗ ಆಗುತ್ತಿಲ್ಲ. ದಯವಿಟ್ಟು ತಾವು ಇದನ್ನು ತಿಳಿದುಕೊಳ್ಳಬೇಕು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಸನ್ಮಾನ್ಯ ಸಚಿವರು ನಾನು ಹೇಳಿರತಕ್ಕಂತಹ ಆಪಾದನೆಯನ್ನು ಸರಿ ಎಂದು ಒಪ್ಪಿಕೊಂಡರು.

ಅಧ್ಯಕ್ಷರು:- ತಮ್ಮ ಆಪಾದನೆ ಸರಿ ಎಂದು ಮಾನ್ಯ ಸಚಿವರು ಒಪ್ಪಿಕೊಂಡರಲ್ಲಾ.

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ: ಹೌದು, ನಾನು ಮಾಡಿರತಕ್ಕ ಆಪಾದನೆ ಸರಿಯಾಗಿದೆ. ಆ ಇಲಾಖೆಯವರ ಮೇಲೆ ಏನು ಕಂಟ್ರೋಲ್ ಮಾಡಿದ್ದಾರೆ ಅಥವಾ ಅದನ್ನು ಎಷ್ಟು.

ಅಧ್ಯಕ್ಷರು:- ಅಂತಹ ಸಂದರ್ಭಗಳಲ್ಲಿ ಹಣ ಕೂಡ ಹಿಂದಕ್ಕೆ ವಾಪಸ್ ಕಳುಹಿಸಿದ್ದಾರೆ ಎಂದ ಮೇಲೆ ತಮ್ಮ ಆಪಾದನೆ ಸರಿ ಎಂದಾಯಿತಲ್ಲಾ. ಮಾನ್ಯ ಸಚಿವರು ಯಾವುದೇ ಮುಚ್ಚುಮರೆ ಮಾಡದೇ ಅದನ್ನು ಒಪ್ಪಿಕೊಂಡಿದ್ದಾರೆ.

ಹುಣಸೂರು ಪಟ್ಟಣದ ವ್ಯಾಪ್ತಿಯಲ್ಲಿ ಒಳಚರಂಡಿ ವ್ಯವಸ್ಥೆ ಒದಗಿಸುವುದು

93 (676) ಶ್ರೀ ಸಿ.ಹೆಚ್. ವಿಜಯಶಂಕರ್ (ಹುಣಸೂರು):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಣಸೂರು ಪಟ್ಟಣದ ವ್ಯಾಪ್ತಿಯಲ್ಲಿ ಈ ಹಿಂದೆ ಒಳಚರಂಡಿ ವ್ಯವಸ್ಥೆ ಜಾರಿ ಮಾಡಿದ್ದು ಸದರಿ ಕೆಲಸ ಪೂರ್ಣಗೊಳ್ಳದಿರಲು ಕಾರಣಗಳೇನು? ಈಗ ಯಾವ ಹಂತದಲ್ಲಿದೆ.

ಆ) ಎಷ್ಟು ದಿನಗಳಲ್ಲಿ ಸದರಿ ಕಾರ್ಯವನ್ನು ಪೂರ್ಣಗೊಳಿಸಲಾಗುವುದು.

ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು).

ಅ) ಹುಣಸೂರು ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯು 77.00 ಲಕ್ಷ ರೂ. ಗಳ ಅಂದಾಜಿಗೆ ಅಧಿಸೂಚನೆ ಸಂಖ್ಯೆ:ಹೆಚ್‌ಯುಡಿ:70:ಯುಡಿಎ:81, ದಿನಾಂಕ:26-2-82ರಲ್ಲಿ ಆಡಳಿತಾತ್ಮಕ ಮಂಜೂರಾತಿ ಮಂಜೂರಾತಿ ಕೊಡಲಾಗಿದೆ. 1987ರ ಹೊತ್ತಿಗೆ ಪಟ್ಟಣದ ಅಂದಾಜಿನಲ್ಲಿ ಅಳವಡಿಸಲಾದ ಎರಡು ವಿಭಾಗದ ಒಳಚರಂಡಿ ಕೊಳವೆ ಮಾರ್ಗದ ಕೆಲಸವನ್ನು ಮುಗಿಸಲಾಯಿತು. ಆದರೆ ಈ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಗ್ರಾಮಸಾರವನ್ನು ಶುದ್ಧೀಕರಿಸಬೇಕಾಗಿದ್ದರಿಂದ ಈ ಕೆಲಸಕ್ಕೆ ಜಮೀನಿನ ಭೂಸ್ವಾಧೀನದಲ್ಲಿ ವಿಳಂಬವಾಗಿ ಕೆಲಸವನ್ನು ಕೈಗೊಳ್ಳಲಿಲ್ಲ. ಈಗ ಮಂಡಳಿಗೆ ನಿವೇಶನವನ್ನು ಹಸ್ತಾಂತರಿಸಿರುವುದರಿಂದ ಈ ಕೆಲಸವನ್ನು ಕೈಗೊಳ್ಳಲು ಪರೀಷ್ಕೃತ ಅಂದಾಜನ್ನು ತಯಾರಿಸಿ, ಅದು ಮೂಲ ಅಂದಾಜಿಗಿಂತ 173.00 ಲಕ್ಷ ರೂ.ಗಳ ಹೆಚ್ಚು ಆಗುವುದರಿಂದ ಪರಿಷ್ಕೃತ ಅಂದಾಜಿಗೆ ಅನುಮೋದನೆ ಕೊಡುವ ಬಗ್ಗೆ ಸರ್ಕಾರವು ಪರಿಶೀಲಿಸಬೇಕಾಗಿದೆ.

ಅ) ಸದರಿ ಯೋಜನೆಯ ಪರಿಷ್ಕೃತ ಅಂದಾಜಿಗೆ ಅನುಮೋದನೆ ದೊರೆತ ನಂತರ ಉಳಿದ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು.

ಶ್ರೀ ಸಿ.ಹೆಚ್. ವಿಜಯಶಂಕರ್:- ಮಾನ್ಯ ಅಧ್ಯಕ್ಷರೇ, ನಾನು ನಮ್ಮ ಹುಣಸೂರು ಪಟ್ಟಣದ ವ್ಯಾಪ್ತಿಯಲ್ಲಿ ಈ ಹಿಂದೆ ಒಳಚರಂಡಿ ವ್ಯವಸ್ಥೆ ಜಾರಿಯಾಗಿದ್ದು, ಅದನ್ನು ಏಕೆ ಮುಗಿಸಿಕೊಡಲಿಕ್ಕೆ ಸಾಧ್ಯವಾಗಿಲ್ಲ ಎನ್ನುವಂತಹ ಪ್ರಶ್ನೆಯನ್ನು ಕೇಳಿದ್ದೇನೆ. ಅದಕ್ಕೆ ಸನ್ಮಾನ್ಯ ಸಚಿವರು ಗ್ರಾಮಸಾರ ಶುದ್ದೀಕರಣ ಮಾಡಲಿಕ್ಕೆ ಬೇಕಾದಂತಹ ಜಾಗವನ್ನು ಸ್ವಾಧೀನ ಮಾಡಿಕೊಳ್ಳುವಂತಹ ವಿಚಾರದಲ್ಲಿ ವಿಳಂಬವಾಯಿತು, ಆ ಪ್ರಕ್ರಿಯೆ ಈಗ ಮುಗಿದಿದೆ. ಅದಕ್ಕೆ ಬೇಕಾದಂತಹ ಹೆಚ್ಚುವರಿ ಪರಿಷ್ಕೃತ ಅಂದಾಜು ಏನಿದೆ, ಅದು 173 ಲಕ್ಷ ಹೆಚ್ಚಿಗೆ ಬಂದಿದೆ. ಅದಕ್ಕೋಸ್ಕರ ಸರ್ಕಾರದ ಅನುಮೋದನೆಯನ್ನು ಪಡೆಯಬೇಕಾಗಿರುವಂತಹ ಸಂದರ್ಭ ಇರುವುದರಿಂದ ವಿಳಂಭವಾಗಿದೆ ಎನ್ನುವಂತಹ ಮಾತನ್ನು ಮಾನ್ಯ ಸಚಿವರು ಹೇಳಿದ್ದಾರೆ. ಈ ಒಂದು ಪರಿಷ್ಕೃತ ಅಂದಾಜಿನ ಪ್ರಕಾರ 173 ಲಕ್ಷ ರೂ. ಹೆಚ್ಚು ಆಗಿದೆ. ನನಗೆ ಭಯವಾಗಿರುವುದು ಏನೆಂದರೆ, ಇಲ್ಲಿ ಸನ್ಮಾನ್ಯ ಸಚಿವರು ಏನು ಹೇಳಿದ್ದಾರೆ ಎಂದರೆ, ಈ ಅಂದಾಜಿಗೆ ಅನುಮೋದನೆ ಕೊಡುವ ಬಗ್ಗೆ ಸರ್ಕಾರ ಪರಿಶೀಲಿಸಬೇಕಾಗಿದೆ ಎಂದು ಹೇಳುತ್ತಾರೆ. ಇದನ್ನು ಪರಿಶೀಲಿಸಿ ಅಂದಾಜಿತ ಪರಿಷ್ಕೃತ ವೆಚ್ಚ 173 ಲಕ್ಷ ರೂ. ಹೆಚ್ಚುವರಿ ಅನುದಾನವನ್ನು ಒದಗಿಸಿ ಕೆಲಸವನ್ನು ಪ್ರಾರಂಭ ಮಾಡುತ್ತೀರಾ? ಮಾಡುವುದಾದರೆ ಎಷ್ಟು ದಿವಸಗಳಲ್ಲಿ ಮಾಡುತ್ತೀರಿ? ಯಾವಾಗ ಮುಗಿಸಿ ಕೊಡುತ್ತೀರಿ ಎಂಬುದನ್ನು ತಿಳಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಿಳಿಸಿದ ಹಾಗೆ.

ಅಧ್ಯಕ್ಷರು:- ಒಂದು ನಿಮಿಷ. ಮಾನ್ಯ ಎಲ್ಲಾ ಸದಸ್ಯರುಗಳಲ್ಲಿಯೂ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಕನಿಷ್ಟ ಪ್ರಶ್ನೋತ್ತರದ ವೇಳೆಯಲ್ಲಾದರೂ ಕೂಡ ಸ್ವಲ್ಪ ಪರಸ್ಪರ ಮಾತನಾಡುವುದನ್ನು ನಿಲ್ಲಿಸದರೆ ನನಗೆ ಸದನ ನಡೆಸಲು ಅನುಕೂಲವಾಗುತ್ತದೆ. ತಾವು ತಮ್ಮ ತಮ್ಮಲ್ಲೇ ಅಸೆಂಬ್ಲಿ ನಡೆಸುವ ಹಾಗಿದ್ದರೆ ಬೇಕಾಗಿದ್ದರೆ ಒಂದೆರಡು ಗಂಟೆ ಮುಂದೂಡುತ್ತೇನೆ, ಆ ಮೇಲೆ ಬೇಕಾಗಿದ್ದರೆ ಬಂದು ಸೇರೋಣ. ಎಷ್ಟು ಸಲ ಶಾಲೆಯಲ್ಲಿ ಹೇಳಿದಂತೆ ಹೇಳಬೇಕು ಹೇಳಿ? ಪ್ರಶ್ನೋತ್ತರ ಇದ್ದಾಗ ಸಂಬಂಧಿಸಿದ ಮಂತ್ರಿಗಳ ಪ್ರಶ್ನೆ ಇದ್ದಾಗಲೇ ಅವರ ಹತ್ತಿರವೇ ಬೇರೊಬ್ಬ ಸದಸ್ಯರು ಹೋಗಿ ಕುಳಿತುಕೊಳ್ಳುತ್ತಾರೆ. ಅವರು ಸದಸ್ಯರನ್ನು ಕಳುಹಿಸುವ ಹಾಗೂ ಇಲ್ಲ. ದಯವಿಟ್ಟು ಈ ಕಲಾಪಗಳಿಗೆ ಸ್ವಲ್ಪ ಗೌರವ ಬರುವ ರೀತಿ ನಡೆದುಕೊಳ್ಳಬೇಕು ಎಂದು ನಾನು ತಮ್ಮೆಲ್ಲರನ್ನೂ ಅತ್ಯಂತ ವಿನಯದಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಸುಮಾರು 77 ಲಕ್ಷ ರೂ. ಗಳಲ್ಲಿ 1972ರಲ್ಲಿ ಮಂಜೂರಾತಿ ಕೊಟ್ಟಂತಹ ಒಳಚರಂಡಿ ವ್ಯವಸ್ಥೆ ಇದು. ಹುಣಸೂರು ಪಟ್ಟಣಕ್ಕೆ 1987ರಲ್ಲಿ ಎರಡು ವಿಭಾಗದಲ್ಲಿ ಮಾತ್ರ ಕಾರ್ಯ ಮುಗಿಸಿ ಅದನ್ನು ಬೇರೆ ಬೇರೆ ಡೌನ್ ಸ್ಟ್ರೀಮ್‌ನಲ್ಲಿ ಬಿಡುವಂತಹ ವ್ಯವಸ್ಥೆ ಆಗಿದೆ. ಅದಕ್ಕೆ ಟ್ರೀಟ್‌ಮೆಂಟ್ ಪ್ಲಾಂಟ್-ನ್ನೆಲ್ಲಾ ಕಟ್ಟಿ ಆಗಬೇಕು ಎನ್ನುವಂತಹ ಕಾರ್ಯಕ್ಕೆ, ಇವತ್ತು ನಿಮಗೆ ಗೊತ್ತಿದೆ, ಭೂ ಸ್ವಾಧೀನ ಕಾರ್ಯ ಆಗಿದೆ. ಅದಕ್ಕೋಸ್ಕರ ಅದು ತಡವಾಯಿತು. ಈಗ ಭೂ ಸ್ವಾಧೀನ ಕಾರ್ಯವಾಗಿರುವುದರಿಂದ

ಇವತ್ತು ಆದು 173 ಲಕ್ಷ ರೂ. ಗಳ ಒಟ್ಟು ಅಂದಾಜು ಇದೆ. ನಾವು ಇದುವರೆವಿಗೂ 113 ಲಕ್ಷ ರೂ. ಗಳನ್ನು ಖರ್ಚು ಮಾಡಿದ್ದೇವೆ. ಅದಕ್ಕೆ ತಮಗೆ ಗೊತ್ತಿದೆ, 4 ಕಿಮೀ. ಮತ್ತು ವೆಟ್‌ವೆಲ್‌ನ ಕಾರ್ಯ ಮಾಡುತ್ತಾ ಇರತಕ್ಕಂಥದ್ದು, ರೈಸಿಂಗ್ ಮೈನ್ ಕಾರ್ಯ ಸಿ.ಐ. ಪೈಪ್ ಬಂದಿದೆ, ಟ್ರೀಟ್‌ಮೆಂಟ್ ಪ್ಲಾಂಟ್ ಮಾತ್ರ ಬ್ಯಾಲೆನ್ಸ್ ಉಳಿದಿರುವ ಕಾರ್ಯವಾಗಿದೆ. ತಾವು ಕೇಳಿರತಕ್ಕಂಥದ್ದು ಈಗ, 173 ಲಕ್ಷ ರೂ. ಅಲ್ಲ, ಇವೆಲ್ಲಾ ಸೇರಿ 250 ಲಕ್ಷ ರೂ. ಬೇಕಾಗುತ್ತದೆ. ಪರಿಷ್ಕೃತ ಅಂದಾಜು ಇವತ್ತು 250 ಲಕ್ಷ ರೂ. ಬೇಕಾಗುತ್ತದೆ. ಅದಕ್ಕೆ ಅನುಮೋದನೆ ತಾವು ಕೊಡುತ್ತೀರೋ ಮತ್ತು ಈ ಸಾಲಿನಲ್ಲಿ ಸದರಿ ಕಾರ್ಯವನ್ನು ಕೈಗೆತ್ತಿಕೊಳ್ಳುವಿರೋ ಎಂದು ತಾವು ನನಗೆ ಕೇಳಿದ್ದೀರಿ, 1997-98ರಲ್ಲಿ ಇದನ್ನು ತೆಗೆದುಕೊಂಡು ಉಳಿದಂತಹ ಕೆಲಸವನ್ನು ಮುಗಿಸಿ ಕೊಡುತ್ತೇನೆ.

ಶ್ರೀ ಸಿ.ಹೆಚ್. ವಿಜಯಶಂಕರ್:- ನಾನು ಹೆಚ್ಚಿಗೆ ಸಮಯನ್ನು ತೆಗೆದುಕೊಳ್ಳುವುದಿಲ್ಲ. ಮಾನ್ಯ ಸಚಿವರ ಕಳಕಳಿ ಬಗ್ಗೆ, ಪ್ರಾಮಾಣಿಕತೆ ಬಗ್ಗೆ ನನಗೆ ಅಪಾರ ಗೌರವ ಇದೆ. ನಾನು ಈ ಸಮಯದಲ್ಲಿ ಹೇಳುವುದಿಷ್ಟೇ. ಪೈಪ್‌ಲೈನ್ ಕೆಲಸ ಮುಗಿಸುವ ಹೊತ್ತಿಗೆ 10 ವರ್ಷಗಳಾಗಿದೆ. ಭೂ ಸ್ವಾಧೀನ ಪ್ರಕ್ರಿಯೆ ಮುಗಿದು 2 ವರ್ಷ ಆಗಿದೆ. ಇದು 15 ವರ್ಷದ ಕೆಲಸ. ದಯವಿಟ್ಟು ಇದನ್ನು ಪ್ರಾಮಾಣಿಕತೆಯಿಂದ ಮಾನ್ಯ ಸಚಿವರು ಏನು ಉತ್ತರವನ್ನು ಕೊಟ್ಟಿದ್ದಾರೋ ಅದೇ ರೀತಿ ಮುಗಿಸಿಕೊಡಲಿಕ್ಕೆ ಪ್ರಯತ್ನವನ್ನು ಮಾಡಬೇಕು. ಏಕೆಂದರೆ ಹಿಂದೆ ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ಪ್ರಾರಂಭವಾದ ಕೆಲಸ ಇದು. ಅವರಿಗೆ ನಾವು ಅಭಾರಿಯಾಗಿದ್ದೇನೆ. ಮಾನ್ಯ ಸಚಿವರು ಕೊಟ್ಟ ಮಾತಿನಂತೆ ಕೆಲಸ ಮುಗಿಸಿ ಬಿಟ್ಟರೆ ಖಂಡಿತವಾಗಿಯೂ ನಾವು ಅವರಿಗೆ ಋಣಿಯಾಗಿರುತ್ತೇವೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಗುಂಡೂರಾಯರ ಹೆಸರು ಹೇಳಿದರು, ಆದರೆ ಮಾನ್ಯ ದೇವರಾಜ್ ಅರಸ್ ರವರ ಕಾಲದಲ್ಲಿ ಇದು ಪ್ರಾರಂಭವಾಗಿದೆ. ಅವರ ಹೆಸರನ್ನು ಇಲ್ಲಿ ನಮೂದು ಮಾಡಬೇಕಾಗುತ್ತದೆ. ಮುಖ್ಯಮಂತ್ರಿಗಳಾಗಿದ್ದ ದೇವರಾಜ್ ಅರಸ್ ಅವರ ಕ್ಷೇತ್ರ ಇದು. ಬರೀ ಪೈಪ್‌ಲೈನ್ ಆಗಿದೆ ಮತ್ತು ಮತ್ತೆ ಬೇರೆ ಬೇರೆ ಕಡೆಗೆ ಕೆಲಸ ಹೋಗುತ್ತಿದೆ. ಅದಕ್ಕೆ ಬೇಕಾದಂತಹ ವ್ಯವಸ್ಥೆಯನ್ನು ಈಗ ಮಾಡಿದ್ದೇವೆ, ಕೆಲವು ವೆಟ್‌ವೆಲ್, ಟ್ರೀಪ್‌ಮೆಂಟ್ ಪ್ಲಾಂಟ್ ಇವೆಲ್ಲಾ ಮಾಡಿದ್ದೇವೆ. ತಮಗೆ ತಿಳಿಸಿದ ಹಾಗೆ ಹೆಚ್ಚು ಪರಿಷ್ಕೃತ ಅಂದಾಜನ್ನು ಈಗಾಗಲೇ ಸಿದ್ಧ ಮಾಡಿದ್ದೇವೆ, ಅದರ ಪ್ರಕಾರ ಅದಷ್ಟು ಬೇಗ ಮಾಡಿಸಿ ಕೊಡುತ್ತೇವೆ.

ಶ್ರೀ ಸಿ.ಹೆಚ್. ವಿಜಯಶಂಕರ್: ಈಗೆ 10 ವರ್ಷಗಳ ಹಿಂದೆ ಮಾಡಿದ ಈ ಪೈಪ್‌ಲೈನ್ ಹಾಕಿರುವುದರಿಂದ ಅದೆಲ್ಲಾ ಇವತ್ತು ಕಲ್ಲುಮಣ್ಣಿನಿಂದ ಮುಚ್ಚಿಹೋಗಿವೆ. ಅದ್ದರಿಂದ ಆ ಕೆಲಸವನ್ನು ಮಾಡುವಾಗ ಪರಿಷ್ಕೃತ ಅಂದಾಜನ್ನು ತಯಾರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು: ಇದನ್ನು ನೀವೂ ಅವರೂ ಮಾಡಬೇಕಾದ ಅಗತ್ಯ ಇಲ್ಲ, ಅದನ್ನು ಇಂಜಿನಿಯರುಗಳೇ ಎಷ್ಟು ಬೇಕಾದರೂ ಮಾಡುತ್ತಾರೆ. ಪರಿಷ್ಕೃತ ಅಂದಾಜು ಮಾಡಿ ಎಂದು ಅವರಿಗೆ ಹೇಳಿದರೆ ಸಾಕು.

ಶ್ರೀ ಬಿ.ಎನ್. ಬಚ್ಚೇಗೌಡ: ಒಳಚರಂಡಿ ವ್ಯವಸ್ಥೆ ಹೇಗಿದೆ ಎಂದರೆ ಅಲ್ಲಿರುವ ಪುರಸಭೆ, ನಗರಸಭೆಗಳಿಗೆ ನಾವು ಮೇನ್‌ಟೆನನ್ಸ್‌ಗೆ ಹಣ ಕೊಡುತ್ತೇವೆ. ಲೈಸೆನ್ಸ್ ಇರತಕ್ಕ ಪ್ಲಂಬರ್ ಎಲ್ಲಾ ಇಲ್ಲದಿರುವ ಕಾರಣ ಎಲ್ಲೆಲ್ಲಿ ಮಾಡಬೇಕೋ ಅಲ್ಲಲ್ಲಿ ರಾತ್ರಿ ಹೊತ್ತು ದೀಪ ಹಚ್ಚಿಕೊಂಡು ಪೈಪ್‌ಲೈನ್‌ನ್ನು ಒಡೆದುಹಾಕಿ ಅವರವರೇ ಕೆಲಸ ಮಾಡುವಾಗ ಆ ಮಣ್ಣು ಅದರಲ್ಲಿ ಬಿದ್ದು ಮುಚ್ಚಿಕೊಂಡು ನೀರು ಬಿಟ್ಟಾಗ ಆ ನೀರು ಮುಂದೆ ಹರಿಯದೆ ಹಿಂದಕ್ಕೆ ಬಂದು ಅನಾಹುತಗಳಾಗುತ್ತಿರುವುದು ಸರ್ವೇ ಸಾಮಾನ್ಯವಾಗಿದೆ. ಇಡೀ ರಾಜ್ಯದಲ್ಲಿ ಲೈಸೆನ್ಸ್‌ಡ್ ಪ್ಲಂಬರ್ ಕಂಟ್ರಾಕ್ಟರ್ ಮೂಲಕ ಇವುಗಳನ್ನು ಸರ್ಟಿಫೈ ಮಾಡಿಸಿ ಮಾಡಬೇಕು. ಅದರೆ ಇವತ್ತು ಕೆಲವು ಸಲ ಜನರೇ ರಾತ್ರೋರಾತ್ರಿ ಮಾಡಿಕೊಳ್ಳುವಾಗ ಆ ಪೈಪ್‌ನಲ್ಲಿ ಮಣ್ಣು ಕಲ್ಲು ಬಿದ್ದು ಮುಚ್ಚಿಹೋಗುತ್ತದೆ. ನೀರು ಕಟ್ಟಿಕೊಂಡಾಗ ಶಾಸಕರ ಹತ್ತಿರ, ಚುನಾಯಿತ ಪ್ರತಿನಿಧಿಗಳ ಹತ್ತಿರ ಬಂದು ಕಕ್ಕಸ್ಸು ಕಟ್ಟಿಕೊಂಡಿದೆ. ಅದನ್ನು ತೆಗೆಸಿ ಎಂದರೆ ನಮಗೂ ಬಹಳ ಬೇಸರವಾಗುತ್ತದೆ, ಅಸಮಾಧಾನವಾಗುತ್ತದೆ. ಇದು ಬಹಳ ಸಮಂಜಸವಾಗಿ ನಡೆಯುತ್ತಿದೆ ಎಂದು ಹೇಳುವುದಕ್ಕಾಗುವುದಿಲ್ಲ. ನಾವೇ ನಮ್ಮ ಜನರೇ ಈ ಪೈಪ್‌ಲೈನನ್ನು ಈ ವ್ಯವಸ್ಥೆಯನ್ನು ಹಾಳು ಮಾಡುತ್ತಿದ್ದೇವೆ. ಬಳ್ಳಾರಿ, ಹುಬ್ಬಳ್ಳಿ, ಧಾರವಾಡ, ಮೈಸೂರು ಎಲ್ಲ ಕಡೆ ನಾನು ನೋಡಿ ಬಂದಿದ್ದೇನೆ. ಅಷ್ಟೇ ಏಕೆ ಬೆಂಗಳೂರು ನಗರದಲ್ಲಿಯೂ ಕೂಡ 30 ವರ್ಷದ ಹಿಂದಿನ ವ್ಯವಸ್ಥೆಯೇ ನಡೆಯುತ್ತಿದೆ. ಇವತ್ತೂ ಕೂಡ ನಾವು ಟ್ರೀಟ್‌ಮೆಂಟ್ ಪ್ಲಾಂಟ್‌ಗಳನ್ನು ಕಟ್ಟದೆ ಡೌನ್‌ಸ್ಟ್ರೀಂಗಳಿಗೇ ಬಿಟ್ಟಿದ್ದೇವೆ. ಟ್ರೀಟ್‌ಮೆಂಟ್ ಪ್ಲಾಂಟ್‌ಗಳನ್ನು ಕಟ್ಟಿ ಶುದ್ಧೀಕರಿಸುವ ವ್ಯವಸ್ಥೆ ಆಗಿಲ್ಲ. ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಅದರೂ ತಾವು ಸೂಚಿಸಿದಂತೆ ಪೈಪ್‌ಲೈನ್ ಎಲ್ಲೆಲ್ಲಿ ಹಾಳಾಗಿದೆ ಅದನ್ನೆಲ್ಲಾ ಸೇರಿಸಿ 250 ರೂಪಯಿಗಳ ಯೋಜನೆಯನ್ನು ಕೈಗೆತ್ತಿಕೊಂಡಾಗ ಈ ಎಲ್ಲಾ ಕೆಲಸವೂ ಆಗುತ್ತದೆ. ಟ್ರೀಟ್‌ಮೆಂಟ್ ಪ್ಲಾಂಟನ್ನು ಕಟ್ಟಿಸಿ ಈಗಿರತಕ್ಕ ವ್ಯವಸ್ಥೆಯನ್ನು ಸುಧಾರಣೆ ಮಾಡುತ್ತೇವೆ.

498

ಶ್ರೀ ಕೆ. ದಿವಾಕರ ಬಾಬು:- ಮಾನ್ಯ ಪೌರಾಡಳಿತ ಸಚಿವರು ಉತ್ತರವನ್ನು ಒದಗಿಸಿದ್ದೇವೆಂದು ಹೇಳಿದರೂ ಇದುವರೆಗೂ ನನಗೆ ಉತ್ತರವೇ ಬಂದಿಲ್ಲ. ನಾನು ಮುನಿಸಿಪಲ್ ಅಧ್ಯಕ್ಷ ಆಗಿದ್ದಾಗಲೇ ಈ ಷಾಪಿಂಗ್ ಕಾಂಪ್ಲೆಕ್ಸ್ ಬಗ್ಗೆ ಪ್ರೊಪೋಸಲ್‌ನ್ನು ಕಳುಹಿಸಿದ್ದರೂ ಇದುವರೆಗೂ ಉತ್ತರವೇ ಬಂದಿಲ್ಲ.

ಅಧ್ಯಕ್ಷರು:- ನೀವು ಕಳುಹಿಸಿ ಎಷ್ಟು ದಿವಸ ಆಯಿತು?

ಶ್ರೀ ಕೆ. ದಿವಾಕರ ಬಾಬು:- ಸುಮಾರು ಒಂದೂವರೆ ವರ್ಷ ಆಗಿದೆ.

ಅಧ್ಯಕ್ಷರು: ಸಚಿವರೇ, ನೀವು ಇನ್ನೊಮ್ಮೆ ನೋಡಿ, ಅವರು ಅಧ್ಯಕ್ಷರಾಗಿದ್ದಾಗಲೇ ಕಳುಹಿಸಿದ್ದೇವೆ ಎನ್ನುತ್ತಿದ್ದಾರೆ, ನೀವು ಸರ್ಕಾರಕ್ಕೆ ಬಂದಿಲ್ಲ ಒಂದು ಹೇಳುತ್ತಿದ್ದೀರಿ ಒಂದೊಂದು ಸಲ ಹೀಗಾಗುವುದು ಸಹಜ.

ಶ್ರೀ ಬಿ. ಬಚ್ಚೇಗೌಡ:- ನೋಡುತ್ತೇನೆ.

ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ

98(285) ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ):- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳೆಷ್ಟು?

ಆ) ಕೊರಟಗೆರೆ ತಾಲ್ಲೂಕಿನಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳಿವೆ?

ಇ) ಇನ್ನು ಎಷ್ಟು ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗುವುದು (ವಿವರವನ್ನು ನೀಡುವುದು)

ಶ್ರೀ ಮಾಲೀಕಯ್ಯ ಏ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ಹಿಂದುಳಿದ ವರ್ಗದವರಿಗಾಗಿ 994 ಮೆಟ್ರಿಕ್ ಪೂರ್ವ, 157 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿರುತ್ತವೆ.

ಆ) ಕೊರಟಗೆರೆ ತಾಲ್ಲೂಕಿನಲ್ಲಿ ಬಿಟ್ಟು ಹಿಂದುಳಿದ ವರ್ಗದವರಿಗೆ 5 ವಿದ್ಯಾರ್ಥಿನಿಲಯಗಳಿರುತ್ತವೆ.

ಇ) ಪ್ರಸ್ತುತ ವರ್ಷದಲ್ಲಿ ಕೊರಟಗೆರೆ ತಾಲ್ಲೂಕಿನ ಕೋಳಾಲಕ್ಕೆ ಒಂದು ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡಲಾಗಿದ್ದು ಇನ್ನು ಯಾವ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡುವ ಪ್ರಸ್ತಾಪವಿರುವುದಿಲ್ಲ. ಹೆಚ್ಚಿನ ವಿದ್ಯಾರ್ಥಿ ನಿಲಯಗಳಿಗಾಗಿ ಬೇಡಿಕೆಗಳು ಬಂದಲ್ಲಿ, ಹಣದ ಲಭ್ಯತೆ ಆದರಿಸಿ ಪರಿಶೀಲಿಸಲಾಗುವುದು.

(ಉತ್ತರ ಲಗತ್ತಿಸಿದೆ)

ಶ್ರೀ ಸಿ. ಚನ್ನಿಗಪ್ಪ:- ಸನ್ಮಾನ್ಯ ಅಧ್ಯಕ್ಷರೇ ನಮ್ಮ ಉಳ್ಳಾಲ ಹೋಬಳಿ ಮತ್ತು ಯಲಚಗೆರೆ ಹೋಬಳಿಗೆ ಕಳೆದ ವರ್ಷ ಎರಡು ಸಲ ಎರಡು ಹಾಸ್ಟೆಲುಗಳು ಬೇಕು ಎಂದು ಅರ್ಜಿ ಕೊಟ್ಟಿದ್ದಕ್ಕೆ